
ಚಿತ್ರಃ ಮಾಯಕೆಲ ಫೋರಮನ್
The General
ಲೇಖಿಕೆಃ ಜನೆಟ ಚಾರ್ಟರ್ಸ

ಜನರಲ್

ಲೇಖಿಕೆಃ
ಜನೆಟ ಚಾರ್ಟರ್ಸ

ಚಿತ್ರಗಳುಃ
ಮಾಯಕೆಲ ಫೋರಮನ್

ಕನ್ನಡಕ್ಕೆ
ಪ್ರಭಾಕರ ನಾನಾವಟಿ

templar books
an imprint of Candlewick Press

ಬಹಳ ಹಿಂದಿನ ಕಾಲದಲ್ಲಿ ಒಬ್ಬ ಜನರಲ್ ಇದ್ದನು.



ನಸುಕಿನಲ್ಲಿಯೇ ಎಲ್ಲ ಸೈನಿಕರು ಪರೇಡ ಗ್ರೌಂಡಿನ ಮೇಲೆ ಹಾಜರಾಗಿ ಇಸ್ತ್ರಿ ಮಾಡಿದ ಯುನಿಫಾರ್ಮನ್ನು ಹಾಕಿಕೊಂಡು ಲೆಫ್ಟ – ರಾಯಿಟ ಎಂದು ಕೂಗುತ್ತ ಕವಾಯತ್ತು ಮಾಡುತ್ತಿದ್ದರು.

ಮುಂಜಾವಿನ ಪರೇಡ ಮುಗಿದ ಮೇಲೆ ಎಲ್ಲ ಸೈನಿಕರು ತಮಗೆ ಒಪ್ಪಿಕೊಟ್ಟ ಕೇಲಸಕ್ಕೆ ಗುಂಪು ಗುಂಪಾಗಿ ತೆರಳುತ್ತಿದ್ದರು. ಕೆಲವರು ಅಡಿಗೆ ಮಾಡಲು, ಕೆಲವರು ಕುದುರೆಗೆ ಹುಲ್ಲು ತಿನ್ನಿಸಲು, ಇನ್ನೂ ಕೆಲವರು ಕುದುರೆಯಮೇಲೆ ಸವಾರಿ ಮಾಡಿ ತಿರುಗಾಡಲು ಹೋಗುತ್ತಿದ್ದರು.



ರಾತ್ರಿಯ ಸಮಯದಲ್ಲಿ ಛಾವಣಿಯಲ್ಲಿ ಶಾಂತತೆ ಇದ್ದಾಗ ಜನರಲ್ ಜೋಧಪುರ ಪುಸ್ತಕಗಳನ್ನು ಓದುತ್ತಿದ್ದನು. ಇಡೀ ಜಗತ್ತಿನಲ್ಲಿಯ ಹೆಸರು ಗಳಿಸಿದ ಜನರಲರು ಯುದ್ಧಗಳನ್ನು ಹೇಗೆ ಗೆಲ್ಲುತ್ತಿದ್ದರು ಎಂಬುದರ ಅಭ್ಯಾಸವನ್ನು ಆತ ಮಾಡುತ್ತಿದ್ದನು. ಈ ಶೂರ ವೀರರ ಕತೆ ಓದುವಾಗ ತಾನು ಕೂಡ ಒಂದು ದಿನ ಅವರಷ್ಟೇ ಹೆಸರು ಗಳಿಸಬೇಕೆಂದು ಅವನಿಗೆ ಅನ್ನಿಸುತ್ತಿತ್ತು. ಆ ದಿನದ ದಾರಿಯನ್ನು ಅವನು ಕಾಯುತ್ತಿದ್ದನು. ಪುಸ್ತಕಗಳಲ್ಲಿ ಅವನ ಹೆಸರು ಬರುವದು, ಎಲ್ಲ ಸೈನಿಕರು ಅವನ ಜಯಘೋಷಣೆ ಮಾಡುವರು ಎಂದು ಅವನ ಹಂಬಲ.

ಒಂದು ಬಿಡುವಿನ ದಿನ ತನ್ನ ಬಿಳಿ ಕುದುರೆಯ ಮೇಲೆ ಕುಳಿತು ಅಡವಿಯ ಬದಿಯ ದಾರಿಯಿಂದ ಜನರಲ್ ಹೋಗುತ್ತಿದ್ದನು. ಅಲ್ಲಿ ಒಂದು ಕೆಂಪು ನರಿ ಕುದುರೆಯ ಎದುರಿನಿಂದ ಓಡಿ ಹೋಯಿತು. ನರಿಯನ್ನು ನೋಡಿ ಕುದುರೆ ಅಂಜಿ ಹೋಯಿತು. ಮುಂಗಾಲುಗಳನ್ನು ಮೇಲೆತ್ತಿ ಹಿಂಗಾಲುಗಳ ಮೇಲೆ ನಿಲ್ಲತೊಡಗಿತು. ಈ ಗೊಂದಲದಲ್ಲಿ ಜನರಲ್ ನೆಲದ ಮೇಲೆ ಬಿದ್ದನು. ಹುಲ್ಲಿನ ಮೇಲೆ ಬಿದ್ದಿದ್ದರಿಂದ ಅವನಿಗೆ ಪೆಟ್ಟು ತಾಗಲಿಲ್ಲ. ಆದರೆ ಕುದುರೆ ಅಡವಿಯಲ್ಲಿ ಓಡಿ ಹೋಯಿತು.

ಕುದುರೆಯ ಮೇಲಿಂದ ಬಿದ್ದರೂ ಅಷ್ಟು ಪೆಟ್ಟು ಹತ್ತಿರಲಿಲ್ಲ. ಆತನು ಮೃದುವಾದ ಹುಲ್ಲಿನ ಮೇಲೆ ಬಿದ್ದಿದ್ದರಿಂದ ಅವನಿಗೆ ನೋವಿರಲಿಲ್ಲ. ಹುಲ್ಲಿನ ಮೃದುತನ ಹಾಗು ಅದರ ವಾಸನೆ ಅವನಿಗೆ ಹಿಡಿಸಿತು. ಬಿದ್ದಲ್ಲಿಂದ ಏಳಲೇ ಬಾರದು ಎಂದು ಅವನಿಗೆ ಅನ್ನಿಸತೊಡಗಿತು. ಸೂರ್ಯನ ಕಡೆ ನೋಡುತ್ತ ಆತ ಮಲಗಿಕೊಂಡನು.



ಸಾಕಷ್ಟು ಸಮಯ ಮಲಗಿಯಾದ ಮೇಲೆ ಛಾವಣಿಗೆ ತೆರಳುವ ನೆನಪು ಅವನಿಗೆ ಆಯಿತು. ಮನಸ್ಸನ್ನು ಗಟ್ಟಿ ಮಾಡಿ ಅವನು ಹೆಜ್ಜೆ ಇಡತೊಡಗಿದನು. ಈ ದಾರಿಯಿಂದ ಆತ ಹಾಗು ಅವನ ಸೈನ್ಯ ಸಾಕಷ್ಟು ವೇಳೆ ಹೋಗಿರಬಹುದು. ಆದರೆ ಇಂದು ಮಾತ್ರ ಏನೋ ಹೊಸದನ್ನು ನೋಡುತ್ತಿರುವ ಹಾಗೆ ಅನ್ನಿಸತೊಡಗಿತು. ಆತನು ಸಾಕಷ್ಟು ವೇಳೆ ಕುದುರೆಯ ಮೇಲೆ ಕುಳಿತು ಹೋಗಿದ್ದರಿಂದ ಈ ಪರಿಸರದಲ್ಲಿಯ ಸಂಗತಿಗಳು ಲಕ್ಷಕ್ಕೆ ಬಂದಿರಲಿಕ್ಕಿಲ್ಲ.

ದಾರಿಯಲ್ಲಿ ಮೊಲಗಳು, ಇಣಚಿಗಳು ಓಡಾಡುತ್ತಿದ್ದವು. ಇಲಿಗಳು ಜಿಗಿದಾಡುತ್ತಿದ್ದವು. ಪಾರಿವಾಳಗಳು ಹಾಗು ನವಿಲುಗಳು ಕೂಡ ಅವನಿಗೆ ಕಂಡವು.

.

ಹಕ್ಕಿಗಳ ಹಾಡುಗಳನ್ನು ಅವನು
ಕೇಳತೊಡಗಿದನು. ಅಂದ ಚೆಂದದ
ಹೂವುಗಳಿಂದ ಸಿಂಗರಿಸಿದ ಹಾಗಿರುವ
ಅಡವಿಯ ಹತ್ತಿರ ಬಂದಾಗ ಅವನಿಗೆ
ಅಚ್ಚರಿಯಾಯಿತು. ಅದು ಒಂದು ಬಹು
ಮನಸೆಳೆಯುವ ದೃಶ್ಯವಾಗಿತ್ತು.
ಇಷ್ಟೊಂದು ಬಣ್ಣಬಣ್ಣದ ಹೂಗಳಿದ್ದ ಬಗ್ಗೆ
ಅವನು ಕಲ್ಪನೆ ಕೂಡ ಮಾಡಿರಲಿಲ್ಲ.

ಜನರಲ್ ಜೋಧಪುರ ಒಂದಿಷ್ಟು ಸಮಯ
ಸ್ತಬ್ಧವಾಗಿ ನಿಂತು ಬಿಟ್ಟನು. ಆಮೇಲೆ
ಮೆಲ್ಲನೆ ನಡೆಯತೊಡಗಿದನು. ಹೂವಿನ
ಹಾಸಿಗೆಯ ಮೇಲೆ ಹೋಗಿ ಕುಳಿತನು.
ಜೇನ್ನೊಣಗಳು ಹೂವುಗಳನ್ನು
ಮುತ್ತಿದ್ದವು. ಹೂವಿನ ರಸವನ್ನು
ಹೀರುತ್ತಿದ್ದವು. ಒಂದಾದರೂ ಜೇನ್ನೊಣ
ಅವನ ಮೂಗಿನ ಮೇಲೆ ಕುಳಿತು
ಕೊಳ್ಳಬಹುದೆಂದು ಅವನ ಅಂಜಿಕೆ.
ಜೆನ್ನೊಣಗಳೆಲ್ಲ ತಮ್ಮ ಕೆಲಸದಲ್ಲಿ
ಇದ್ದದ್ದರಿಂದ ಜನರಲಕಡೆ ನೋಡಲು
ಅವುಗಳಿಗೆ ಪುರಸತ್ತು ಇರಲಿಲ್ಲ.

ಆತನು ಹೂಗಳನ್ನು ಹಾಗು ಜೇನ್ನೊಣಗಳನ್ನು ಸಾಕಷ್ಟು ವೇಳೆ ನೋಡುತ್ತ ಕುಳಿತನು. ಎಲ್ಲ ಬದಿಯಲ್ಲಿ ಶಾಂತತೆ. ಒಂದಿಷ್ಟು ಸಪ್ಪಳವಿಲ್ಲ. *ಇದೆಲ್ಲ ಈ ಮೊದಲು ನನಗೆ ಹೇಗೆ ತಿಳಿಯಲಿಲ್ಲ* ಎಂದು ಆಶ್ಚರ್ಯಪಟ್ಟನು. ಎದ್ದು ನಿಂತಾಗ ತಾನು ಹೂಗಳ ಮೇಲೆ ಕುಳಿತಿದ್ದರ ಅರಿವು ಆಯಿತು. ಕೂತಲ್ಲಿಯ ಹೂಗಳೆಲ್ಲ ಬಾಡಿದ್ದವು. ಈ ಹೂಗಳಿಂದ ದೂರಹೋಗಲೇ ಬಾರದೆಂದು ಅವನಿಗೆ ಅನ್ನಿಸತೊಡಗಿತು. ಆದರೆ ಸೈನಿಕರ ಛಾವಣಿಗೆ ಹೋಗಲೇಬೇಕಿತ್ತು. ಅಲ್ಲಿಯ ಎರಡು ಹೂಗಳನ್ನು ಕಿತ್ತಿ ಕೈಯಲ್ಲಿ ಹಿಡಿದುಕೊಂಡು ಹೋಗತೊಡಗಿದನು.

ಜನರಲ್ ಜೋಧಪುರ ಛಾವಣಿ ತಲುಪಿದಾಗ ಕತ್ತಲೆಯಾಗಿತ್ತು. ಕೈಯಲ್ಲಿದ್ದ ಹೂಗಳನ್ನು ನೀರಿರುವ ಪಾತ್ರೆಯಲ್ಲಿಟ್ಟು ಆತ ಮಲಗಿದನು.

ಆ ರಾತ್ರಿ ನಿದ್ದೆಯಲ್ಲಿದ್ದಾಗ ಆತನು ಚಿತ್ರವಿಚಿತ್ರ ಕನಸುಗಳನ್ನು ಕಂಡನು. ಹಕ್ಕಿಗಳು, ಪ್ರಾಣಿಗಳು, ಸೂರ್ಯ, ಹೂವುಗಳು ಪರೇಡ ಮಾಡುವ ಸೈನಿಕರ ಹಾಗೆ ಕಂಡವು. ಸಾವಿರಾರು ಸೈನಿಕರ ಕಾಲ್ನಡಿಗೆ ಸಪ್ಪಳಕ್ಕೆ ಅಂಜಿ ಎಲ್ಲ ಹಕ್ಕಿಗಳು ಹಾಗು ಪ್ರಾಣಿಗಳು ಓಡಿಹೋದವು. ಸೈನಿಕರೆಲ್ಲ ಹೂಗಳನ್ನು ಕಾಲಿನಿಂದ ತುಳಿದು ಮುದ್ದೆ ಮಾಡಿದ್ದರು. ಜನರಲಗೆ ಸಾಕಷ್ಟು ಸಿಟ್ಟು ಬಂದಿತು. ನಿಲ್ಲಿ, ನಿಲ್ಲಿ, ಎಂದು ಕೂಗತೊಡಗಿದನು. ಆದರೆ ಇದೆಲ್ಲ ಕನಸು ಎಂದು ಅರಿವಾಯಿತು. ಮತ್ತೆ ನಿದ್ದೆ ಮಾಡಬೇಕೆಂದೆನ್ನಿಸತೊಡಗಿತು. ಆದರೆ ನಿದ್ದೆ ಬರಲಿಲ್ಲ.



ಅವನ ಸೈನಿಕರು ಹಾಗು ಅವನು ಕೂಡ ಈ ಚೆಂದದ ಹೂಗಳನ್ನು ಸಾವಿರಾರು ವೇಳೆ ಕಾಲಿನಿಂದ ತುಳಿದಿರಬಹುದು ಎಂಬುದು ಅವನಿಗೆ ಗೊತ್ತಿತ್ತು. ಈ ಸೈನಿಕರನ್ನು ನೋಡಿಯೇ ಪ್ರಾಣಿಗಳೆಲ್ಲ ಓಡಿ ಹೋಗಿರಬೇಕು ಎಂಬುದರ ಕಲ್ಪನೆ ಅವನಿಗೆ ಇತ್ತು. " ನಾನು ಆ ಹಕ್ಕಿ ಹಾಗು ಪ್ರಾಣಿಗಳಿಗೆ ಅಂಜಿಕೆ ಬರುವ ಹಾಗೆ ಏನನ್ನು ಮಾಡುವದಿಲ್ಲ. ಅವುಗಳಿಗೆ ಸಹಾಯ ಮಾಡುವೆ. ಹೂ ಹಾಗು ಗಿಡಗಳು ಬೆಳೆಯುವ ಸಲುವಾಗಿ ಸಹಾಯ ಮಾಡುವೆ. " ಎಂದು ಅವನು ನಿಶ್ಚಯಿಸಿದನು.

ಮರುದಿನ ಎದ್ದಕೂಡಲೇ ಎಲ್ಲ ಸೈನಿಕರನ್ನು ಪರೇಡ ಗ್ರೌಂಡಿನ ಮೇಲೆ ಬರಹೇಳಿದನು. "ನೀವೆಲ್ಲರು ಇನ್ನು ಮುಂದೆ ಸೈನಿಕರಾಗಿ ಕೆಲಸ ಮಾಡುವ ಅವಶ್ಯಕತೆ ಇಲ್ಲ. ನಿಮ್ಮ ನಿಮ್ಮ ಊರಿಗೆ, ಮನೆಗೆ ಹೋಗಿ. ಅಲ್ಲಿ ನಿಮ್ಮ ಬೇಸಾಯವನ್ನು ಮಾಡಿ." ಅವನು ಹೇಳತೊಡಗಿದನು. "ನಮ್ಮ ಈ ದೇಶ ಬಹು ಸುಂದರವಾದ ದೇಶ. ಅದನ್ನು ಮತ್ತಷ್ಟು ಸುಂದರ ಮಾಡಲು ನಾವೆಲ್ಲರೂ ಪ್ರಯತ್ನಿಸುವ. ಅದಕ್ಕಾಗಿ ನೀವು ನನಗೆ ಸಹಾಯ ಮಾಡಿ " ಎಂದು ಬಿನ್ನಯಿಸಿದನು.

ಎಲ್ಲರಿಗೂ ಸಂಭ್ರಮವೇ ಸಂಭ್ರಮ. ಜನರಲ್ ಕೂಡ ಆನಂದಿತನಾದನು.

ಒಕ್ಕಲಿಗರೆಲ್ಲ ಹೊಲಕ್ಕೆ ಹೋಗಿ ಹೊಲಗೆಲಸ
ಮಾಡತೊಡಗಿದರು. ಬೀಜಗಳನ್ನು ನೆಟ್ಟಿ ಬೆಳೆ ಎತ್ತರವಾಗುವ
ಹಾಗು ಸುಗ್ಗಿಯ ದಾರಿ ನೋಡತೊಡಗಿದರು.

ಮೀನುಗಾರರೆಲ್ಲ ತಮ್ಮ ಬಲೆಗಳನ್ನು ತೆಗೆದುಕೊಂಡು ತಮ್ಮ ತಮ್ಮ ದೋಣಿಗಳಲ್ಲಿ ಕುಳಿತು ಮೀನುಗಳನ್ನು ಹಿಡಿಯಲಿಕ್ಕೆ ಸಮುದ್ರದಲ್ಲಿ ಇಳಿದರು.

ಜನರಲನು ಕಟ್ಟಡಗಳನ್ನು ಕಟ್ಟುವವರನ್ನೆಲ್ಲ ಒಟ್ಟಿಗೆ ಕರೆದು ಈ ದೇಶದಲ್ಲಿಯ ಎಲ್ಲ ಸೈನಿಕ ಬಡಾವಣೆಗಳ ಜಾಗದಲ್ಲಿ ನಗರಗಳನ್ನು ಕಟ್ಟಲು ಪ್ರೇರೇಪಿಸಿದನು.



“ಆ ನಗರಗಳಲ್ಲಿ ಶಾಲೆಗಳು, ಅಂಗಡಿಗಳು, ಆಟವಾಡಲು ಬಯಲು, ಹಾಗು ಉದ್ಯಾನಗಳು ಇರಲಿ . ” ಎಂದು ಹೇಳಿದನು.




ICES

ಜನರಲನು ಸಾಕಷ್ಟು
ಉತ್ಸಾಹಿತನಾಗಿದ್ದನು.
ಎಲ್ಲ ಕೆಲಸಗಳನ್ನು ಸ್ವತಃ
ನಿಂತು ವೀಕ್ಷಿಸುತ್ತಿದ್ದನು.
ಕೆಲಸದಲ್ಲಿಯ ಪ್ರಗತಿ
ನೋಡಿ ಆನಂದಿತ-
ನಾಗುತ್ತಿದ್ದನು.

ಈ ಮೊದಲು ಭೆಟ್ಟಿಕೊಟ್ಟ
ಹೂದೋಟಕ್ಕೂ ಆತನು
ದಿನಾಲು ಹೋಗುತ್ತಿದ್ದನು.

ಚಳಿಗಾಲದ
ದಿನಗಳಿದ್ದರಿಂದ ಇನ್ನೂ
ಹೂಗಳು ಅರಳಿರಲಿಲ್ಲ.
ಆದರೂ ಹೂದೋಟದಲ್ಲಿ
ತಿರುಗಾಡಲು ಅವನಿಗೆ
ಸೇರುತ್ತಿತ್ತು.

ಕೆಲ ದಿನಗಳಲ್ಲಿಯೇ
ಹೂಗಳು ಅರಳುವವು
ಎಂಬುದರ ಭರವಸೆ
ಆತನಿಗಿತ್ತು.

ಚಳಿಗಾಲ ಮುಗಿಯಿತು. ಹೂಗಳು ಅರಳತೊಡಗಿದವು. ಗಿಡಗಳಲ್ಲಿ
ಹಸಿರು ಎಲೆಗಳು ಕಾಣದಾದವು.
ಹೊಲಗಳಲ್ಲಿ ಸಾಕಷ್ಟು ಬೆಳೆ ಬಂದಿತ್ತು. ತೆನೆಗಳೆಲ್ಲ ಧಾನ್ಯದಿಂದ ತುಂಬಿ
ಹೋಗಿದ್ದವು.

ಗಿಡಗಳಲ್ಲಿ ಹಣ್ಣುಗಳು ಜೋತಾಡುತ್ತಿದ್ದವು.

ಮೀನುಗಾರರು ಮೀನುಗಳನ್ನು ಹಿಡಿಯಲು ಸಮುದ್ರದಲ್ಲಿ ಹೋಗತೊಡಗಿದರು.

ಒಂದು ದಿನ ಜನರಲ್
ಜೋಧಪುರನಿಗೆ ಎರಡು ಮಹತ್ವದ
ಪತ್ರಗಳು ಬಂದವು. ಅದರಲ್ಲಿಯ
ಒಂದು ಪತ್ರ ಪೂರ್ವ ದಿಕ್ಕಿನ ದೇಶದ
ಜನರಲ್ ನಿಕೋಲಾಯ ಮಾರ್ಕವಿಚ
ಹಾಗು ಎರಡನೆ ಪತ್ರ ಪಶ್ಚಿಮ ದೇಶದ
ಜನರಲ್ ಕಸ್ಟರ್ಡ ಇವರದಿತ್ತು.

ಇಬ್ಬರಿಗೂ ಜನರಲ್ ಜೋಧಪುರನ
ದೇಶದಲ್ಲಿಯ ಇತ್ತೀಚಿನ
ಆಗುಹೋಗುಗಳನ್ನು ನೋಡುವ
ತವಕವಿತ್ತು. ಈ ಜನರಲ್
ಜೋಧಪುರನ ದೇಶದಲ್ಲಿ ಏನು
ನಡೆದಿದೆ ಎಂಬುದನ್ನು ನೋಡುವ
ಉತ್ಸುಕತೆ ಇತ್ತು. ಅದಕ್ಕಾಗಿಯೇ ಈ
ಬಿನ್ನಹ ಪತ್ರಗಳನ್ನು ಅವರು
ಬರೆದಿದ್ದರು.

ಜನರಲ್ ಜೋಧಪುರನು ಕೂಡಲೆ
ದೇಶಕ್ಕೆ ಭೆಟ್ಟಿ ಕೊಡಲು ಔತಣವನ್ನು
ಕೊಟ್ಟನು. ಅವರು ಬಂದಮೇಲೆ
ವಿಜೃಂಭಣೆಯಿಂದ ಊದಿಸುತ್ತ
ಬಾರಿಸುತ್ತ ಬರಗೊಳಿಸಿದನು.
ಅತ್ಯಂತ ಅಭಿಮಾನದಿಂದ ಈ
ಅತಿಥಿಗಳನ್ನು ದೇಶ ತೋರಿಸಲು
ಕರೆದುಕೊಂಡು ಹೋದನು.



ಅವರಿಗೆ ಹೂ-ಹಣ್ಣಿನ ತೋಟಗಳನ್ನು ತೋರಿಸಿದನು. ದಟ್ಟವಾಗಿ ಬೆಳೆದ ಕಾಡನ್ನು ತೋರಿಸಿದನು. ಕಾಯಿಪಲ್ಲೆ ತೊಪ್ಪಲುಪಲ್ಲೆ ಹಾಗು ಧಾನ್ಯಗಳು ಬೆಳೆದ ಹೊಲ, ತೋಟಗಳನ್ನು ತೋರಿಸಿದನು. ನಗರಗಳಲ್ಲಿಯ ಕ್ರೀಡಾಂಗಣ ಹಾಗು ಉದ್ಯನಗಳನ್ನು ತೋರಿಸಿದನು. ಭೆಟ್ಟಿ ಕೊಡಲು ಬಂದ ಜನರಲರು

ಈ ದೇಶದ ಪ್ರಜೆ, ಪ್ರಾಣಿಗಳಿಗೆ ಅಂಜದೆ ಅಳುಕದೆ ಗೆಳೆಯರಂತೆ ಇರುವದನ್ನು ನೋಡಿ ಅಚ್ಚರಿಗೊಂಡರು. ಕೊನೆಯಲ್ಲಿ ಅವರನ್ನು ತಾನು ಮೊಟ್ಟ ಮೊದಲು ನೋಡಿದ ಅಡವಿಯಲ್ಲಿಯ ಹೂದೋಟಕ್ಕೆ ಕರೆದುಕೊಂಡು ಹೋದನು.

ಆ ಅಡವಿಯಲ್ಲಿ ಸಾಕಷ್ಟು ಉದ್ದದವರೆಗೆ ಬಣ್ಣ ಬಣ್ಣದ ಹೂಗಳು ಹರವಿಕೊಂಡಿದ್ದವು. ಸಾವಿರಾರು ಬಣ್ಣಗಳು ಅಲ್ಲಿ ಇದ್ದವು. ಈ ಮೂರು ಜನರಲ್ಲರು ಹೂಗಳಿಗೆ ಧಕ್ಕೆ ತಗಲಿಸದೆ ಮೆಲ್ಲನೆ ಕುಳಿತುಕೊಂಡರು. ಮುಗುಳ್ನಗುತ್ತ “ಇದು ಎಷ್ಟೊಂದು ಒಳ್ಳೆಯ ಕಲ್ಪನೆ ಇದೆ. ನಿನ್ನ ದೇಶ ಜಗತ್ತಿನಲ್ಲಿಯೇ ಒಂದು ಸುಂದರ ದೇಶ!” ಎಂದು ಜನರಲ್ ಕಸ್ಟರ್ಡ ಹೊಗಳಿದನು.

“ಹಾಗು ನಿನ್ನ ದೇಶದಲ್ಲಿಯ ಪ್ರಜೆಗಳೆಲ್ಲ ಸುಖದಿಂದ ಮತ್ತು ಆನಂದದಿಂದ ಜೀವಿಸುತ್ತಿದ್ದಾರೆ. ಜನರಲ್ ಜೋಧಪುರ ನೀನೇ ಈ ಜಗತ್ತಿನಲ್ಲಿಯ ಜನಪ್ರಿಯ ಜನರಲ್ಲನಿರುವಿ ” ಎಂದು ಜನರಲ್ ಮಾರ್ಕೋವಿಚ ಹೇಳಿದನು.

ಜಗತ್ತಿನಲ್ಲಿಯೇ ಶ್ರೇಷ್ಠನಾದ ಹಾಗು ಜನಪ್ರಿಯತೆ ಗಳಿಸಿರುವ ಜನರಲ್ ಜೋಧಪುರ ಹೂಗಳ ಮಧ್ಯದಲ್ಲಿ ಅಡ್ಡ ಬಿದ್ದು ನೆತ್ತಿಗೇರಿದ ಸೂರ್ಯನನ್ನು ನೋಡುತ್ತ ಮಲಗಿ ಬಿಟ್ಟನು.



1938ರಲ್ಲಿ ಜನ್ಮ ತಾಳಿದ ಜನೆಟ ಚಾರ್ಟರ್ಸ ಈ ಲೇಖಿಕೆ ಇಂಗ್ಲಂಡದಲ್ಲಿಯ ಸೇಂಟ ಮಾರ್ಟಿನ ಸ್ಕೂಲ ಆಫ ಆರ್ಟ್ಸದಲ್ಲಿ ಶಿಕ್ಷಣ ತೆಗೆದುಕೊಂಡಳು. ಎರಡನೆ ಮಹಾಯುದ್ಧದ ಕಾಲದಲ್ಲಿಯ ಅನಿಶ್ಚಿತತೆ ಹಾಗು ಅಣುಯುದ್ಧದ ಕತ್ತಲು ನೆರಳು ಅವಳನ್ನು ಅಸ್ವಸ್ಥ-ಗೊಳಿಸುತ್ತದ್ದವು. ಜಗತ್ತಿನಲ್ಲಿ ಶಾಂತಿ ನೆಲೆಸಬೇಕು ಎಂಬ ಪ್ರಯತ್ನ ಅವಳು ಮಾಡುತ್ತಿದ್ದಳು. ಇದರಿಂದಲೇ ಈ ಕತೆಯ ಜನ್ಮವಾಯಿತು. ಅವಳು ಈಗಲೂ ತನ್ನ ಚಿತ್ರಕೃತಿಗಳ ಪ್ರದರ್ಶನಗಳನ್ನು ಏರ್ಪಡಿಸುವಳು.

ಮಾಯಕೆಲ ಫೋರಮನನು 1938ರಲ್ಲಿ ಹುಟ್ಟಿದನು. ಜನೆಟನ ಜತೆ ಗೆಳೆತನ ಕಾಲೇಜಿನಲ್ಲಿ ಆಯಿತು. ಅವನು ಚಿಕ್ಕವನಿದ್ದಾಗ ಅವನ ಮನೆ ಮೇಲೆ ಬಾಂಬುಗಳು ಬಿದ್ದವು. ಆದರೂ ಆತನು ಜೀವ ಉಳಿಸಿಕೊಂಡು ಹೊರಬಿದ್ದನು. ಒಂದು ಶಾಂತಿಯುತ ಜಗವಿರಬೇಕು ಎಂಬ ಕನಸನ್ನು ಆತ ಕಾಣುತ್ತಿದ್ದನು. ಈ ಪುಸ್ತಕ ಅದರ ಫಲಶ್ರುತಿ.

ಐವತ್ತು ವರುಷಗಳ ಹಿಂದೆ ಪ್ರಕಾಶಿತವಾದ ಈ ಪುಸ್ತಕಕ್ಕೆ ಈಗಲೂ ಬೇಡಿಕೆ ಇದೆ. ಜಾಗತ್ತನಲ್ಲಿ ಶಾಂತಿ ಹಾಗು ಪರಿಸರ ರಕ್ಷಣೆಗಳ ಸಂದೇಶ ಕೊಡುವ ಈ ಪುಸ್ತಕ ಸಂವೇದನೆ ಇರುವ ಓದುಗರಿಗೆ ನಿಶ್ಚಿತವಾಗಿ ಸೇರುವದು.